

PRATHAM BOOKS

ಹಂತ ೪

# ಕಥೆ ಚಿಕ್ಕಪ್ಪ

**Original Publisher:** Bachpan Manao, Badhte Jao
**Author:** Reshma Bachwani
**Illustrator:** Nilufer Marshall
**Translator:** Mangala BE

ಸಮರ್ಪಣೆ : ಕರ್ನಾಟಕದ ಗ್ರಾಮ ಪಂಚಾಯತ್ ಗ್ರಂಥಪಾಲಕರಿಗೆ



ಉಮಾ ಪ್ರವೇಶದ್ವಾರದಲ್ಲಿರುವ ದೊಡ್ಡ ಗಂಟೆಯನ್ನು ಬಾರಿಸುತ್ತಾಳೆ.

ಎಲ್ಲಾ ಮಕ್ಕಳು, ದಿನದ ತಮ್ಮ ನೆಚ್ಚಿನ ಸಮಯಕ್ಕಾಗಿ ಒಳಗೆ ನುಗ್ಗುತ್ತಾರೆ - ಕಥಾ ಸಮಯ.



ವಿದ್ಯಾ ಅಕ್ಕ ಸೀಮೆಸುಣ್ಣದ ತುಂಡಿನಿಂದ ನೆಲದ ಮೇಲೆ ವೃತ್ತವನ್ನು ಬರೆಯುತ್ತಿದ್ದ ಹಾಗೇ ಎಲ್ಲಾ ಮಕ್ಕಳು ಅವಳ ಸುತ್ತಲೂ ವೃತ್ತಾಕಾರದಲ್ಲಿ ಕೂರುತ್ತಾರೆ.





ಕೋಣೆಯ ಉದ್ದಗಲಕ್ಕೂ ಕಟ್ಟಿದ ಹಗ್ಗದ ಮೇಲಿರುವ
ಪುಸ್ತಕಗಳಿಂದ ತನ್ನ ನೆಚ್ಚಿನ ಪುಸ್ತಕವನ್ನು ಆರಿಸುವ
ಇಂದಿನ ಸರದಿ ಉಮಾಳದ್ದು.

ಉಮಾ, ತನ್ನ ತುದಿಗಾಲಿನ ಮೇಲೆ ನಿಂತು, **ಕೈ ಚಾ..... ಚಿ,**
ಮುಖಪುಟದಲ್ಲಿ ಅನೇಕ ಪುಸ್ತಕಗಳ ಚಿತ್ರವಿರುವ
ಪುಸ್ತಕವನ್ನು ಎತ್ತಿಕೊಂಡು ವಿದ್ಯಾ ಅಕ್ಕನಿಗೆ ಕೊಡುತ್ತಾಳೆ.


“ಈ ಕಥೆಯನ್ನು ನೀವು ನಮಗೆ ಓದಿ ಹೇಳ್ತೀರಾ ಅಕ್ಕಾ?”

“ಖಂಡಿತಾ ಉಮಾ. ಆದರೆ ಮೊದಲು ನೀನು,
ಈ ಪುಸ್ತಕವನ್ನು ಯಾಕೆ ಆಯ್ಕೆ ಮಾಡಿದೆ ಎಂದು
ಎಲ್ಲರಿಗೂ ಹೇಳಬೇಕು.”

ಉಮಾ ನಿಗೂಢ ಶೀರ್ಷಿಕೆ (ಪುಸ್ತಕದ ಹೆಸರು)
ಯನ್ನು ತೋರಿಸುತ್ತಾ ಹೇಳುತ್ತಾಳೆ
**“ಕಥೆಗಳಿಲ್ಲದ ನಾಡು!!!”**

ನನ್ನ ಜೀವನದಲ್ಲಿ ಕಥೆಗಳೇ ಇಲ್ಲದಿದ್ದರೆ
ಹೇಗಿರುತ್ತಿತ್ತು ಎಂದು ನನಗೆ ಊಹಿಸಲೂ
ಸಾಧ್ಯವಿಲ್ಲ. ನಾನು ಕಥೆಗಳನ್ನು
ತುಂಬಾ ಪ್ರೀತಿಸುತ್ತೇನೆ!”






"ಕಥೆಗಳಿಲ್ಲದ ನಾಡಿನಲ್ಲಿ ಬದುಕುವುದು ಹೇಗೆ ಎಂದು ನೀವು ಊಹಿಸಬಹುದೇ?" ಎಂದು ವಿದ್ಯಾ ಅಕ್ಕ ಇತರ ಮಕ್ಕಳನ್ನು ಕೇಳುತ್ತಾರೆ.

ಆ ಮಕ್ಕಳು ಒಬ್ಬರನ್ನೊಬ್ಬರು ನೋಡಿ,
ಎಲ್ಲರೂ ಒಟ್ಟಿಗೇ ಹೇಳುತ್ತಾರೆ,
**"ಕಥೆಗಳಿಲ್ಲದ ನಾಡು !!!"**

ಅವರೆಲ್ಲರೂ ಆಶ್ಚರ್ಯಗೊಳ್ಳುತ್ತಾರೆ!

“ಈಗ... ಮಕ್ಕಳೇ, ಇದರ ಬಗ್ಗೆ ಯಾರು ಹೆಚ್ಚು ತಿಳಿದುಕೊಳ್ಳಬೇಕು ಅಂತ ಇದೀರಿ?” ವಿದ್ಯಾ ಅಕ್ಕ ಅವರ ಗಮನ ಸೆಳೆಯಲು ಪ್ರಯತ್ನಿಸುತ್ತಾರೆ.

“1, 2, 3... **(ಒಂದು, ಎರಡು, ಮೂರು)**,” ಎಂದು ಅವರು ಎಣಿಸುತ್ತಿದ್ದ ಹಾಗೇ ಮಕ್ಕಳೆಲ್ಲರೂ **“ಶುರು ಮಾಡಿ!”** ಎಂದು ಒಕ್ಕೊರಲಿನಿಂದ ಕೂಗುತ್ತಾರೆ.

***“ಶುರು ಮಾಡಿ!”***

***“ಶುರು ಮಾಡಿ!”***





ವಿದ್ಯಾ ಅಕ್ಕ ತನ್ನ ಧ್ವನಿಯನ್ನು ತಗ್ಗಿಸುತ್ತಿದ್ದಂತೇ... ಕಥೆ ಕೇಳುವುದಕ್ಕಾಗಿ ಮಕ್ಕಳು ತಮ್ಮ ಗುಸುಗುಸು ಪಿಸುಪಿಸು ಮಾತನ್ನು ನಿಲ್ಲಿಸಿ, ಸುಮ್ಮನಾಗುತ್ತಾರೆ.
**ಶ್ ಶ್ ಶ್ ಶ್ ಶ್ !**

“ಒಂದು ದೂರದ ಊರು, ಅಲ್ಲಿಯ ಜನ ಎಲ್ಲಾ ಬೆಳ್ಳಂ ಬೆಳಿಗ್ಗೆ ಎದ್ದು ಮೌನವಾಗಿ ಕೆಲಸ ಮಾಡ್ತಾ ದಿನ ಕಳೀತಾ ಇದ್ದರು.”

“ರೈತ ಮೌನವಾಗಿ ತನ್ನ ಗದ್ದೆಯನ್ನು ಉಳುಮೆ ಮಾಡುತ್ತಾ ಇದ್ದಾನೆ...
**ಟಕ್ ಟಕ್, ಟಕ್ ಟಕ್, ಟಕ್ ಟಕ್**.”







“ಪೋಸ್ಟ್‌ಮ್ಯಾನ್ ಮೌನವಾಗಿ ಮನೆಯ ಮುಂದೆ ಇರೋ ಅಂಚೆ ಪೆಟ್ಟಿಗೆಯನ್ನು ತೆರೆದು ಒಂದು ಮಾತನ್ನೂ ಆಡದೇ ತನ್ನ ಕೆಲಸದಲ್ಲಿ ಮುಳುಗಿ ಹೋಗಿದ್ದಾನೆ. ಆದ್ರೆ , ಅಂಚೆಪೆಟ್ಟಿಗೆ ಮುಚ್ಚಿದಾಗ ಮಾತ್ರ ಕೇಳಿದ್ದು ಒಂದೇ ಸದ್ದು... **ಢಬ್!**”




“ಆ ಊರಲ್ಲಿರೋ ಪ್ರಾಣಿ ಪಕ್ಷಿಗಳೂ ಕೂಡಾ ಮೌನವಾಗಿ ಇದ್ದವು.

ಬೇಸರ ಮತ್ತು ಗೊಂದಲಗೊಂಡಂತೆ ಕಾಣುತ್ತಿದ್ದ ಆ ಊರಿನ ಮಕ್ಕಳು ಬೀದಿಯಿಂದ ಬೀದಿಗೆ ಅಲೆದಾಡುತ್ತಿದ್ದರು.”




“ಅವರು ಸಂಜೆ ಮನೆಗೆ ಹಿಂದಿರುಗಿ, ಸದ್ದಿಲ್ಲದೇ ರಾತ್ರಿಯ ಊಟವನ್ನು ಮಾಡಿ ಮಲಗುತ್ತಿದ್ದರು.”



“ಹೆತ್ತವರು ಅವರ ದೈನಂದಿನ  ಕೆಲಸದಲ್ಲಿ ತುಂಬಾ ದಣಿದಿರುತ್ತಿದ್ದರು. ಅವರಿಗೆ ಯಾವುದೇ ಕಥೆಗಳನ್ನು ನೆನಪಿಟ್ಟುಕೊಳ್ಳುವ ಶಕ್ತಿಯೇ ಇರಲಿಲ್ಲ.


ಅಜ್ಜ, ಅಜ್ಜಿ ಕೂಡಾ ಮನೆಯ ಒಂದು ಮೂಲೆಯಲ್ಲಿ ಸದ್ದಿಲ್ಲದೇ ಕುಳಿತುಕೊಳ್ಳುತ್ತಿದ್ದರು.

ಈ ನಾಡಿನ ಜನರ ಮೇಲೆ ಯಾರೋ ಮಾಟ ಮಂತ್ರ ಮಾಡಿದಂತಿತ್ತು.”



ಗುಂಟು, ಕಥೆ ಓದುತ್ತಿದ್ದ ವಿದ್ಯಾ ಅಕ್ಕನನ್ನು ಮಧ್ಯದಲ್ಲೇ ತಡೆದು,
“ಅಕ್ಕಾ, ಅಕ್ಕಾ, ನನಗೆ ಗೊತ್ತು! ನಾವು ಟಿವಿ ರಿಮೋಟ್
ಕಂಟ್ರೋಲ್‌ನಲ್ಲಿ ಮ್ಯೂಟ್ ಬಟನ್ ಒತ್ತಿದ ಹಾಗೆ.”

“ಖಂಡಿತವಾಗಿಯೂ ಗುಂಟು! ನೀನು ತುಂಬಾ ಚೆನ್ನಾಗಿ ಸಂಬಂಧ
ಕಲ್ಪಿಸಿದೆ.” ಎಂದು ವಿದ್ಯಾ ಅಕ್ಕ ಉದ್ಗರಿಸಿದರು.



“ಗ್ರಾಮದ ಗ್ರಂಥಪಾಲಕ ಶ್ರೀನಿವಾಸ್ ಕೂಡ ಅದೇ ಊರಿನಲ್ಲಿ ವಾಸವಾಗಿದ್ದರು. ಇತರರಂತೆ, ಅವರೂ ಕೂಡಾ ಪ್ರತೀ ದಿನ ಬೆಳಿಗ್ಗೆ ಎದ್ದು, ಪಂಚಾಯತಿ ಕಚೇರಿಯ ಪಕ್ಕದಲ್ಲಿದ್ದ ತಮ್ಮ ಗ್ರಂಥಾಲಯಕ್ಕೆ ಹೋಗುತ್ತಿದ್ದರು.

ಅವರು ಕತೆ ಪುಸ್ತಕಗಳ ದೊಡ್ಡ ಕಪಾಟುಗಳಲ್ಲಿದ್ದ ಧೂಳನ್ನು **ಮೌನವಾಗಿ** ಒರೆಸಿ, ಹೊಸದಾಗಿ ಬಂದ ಪುಸ್ತಕಗಳನ್ನು ಕಪಾಟಿನಲ್ಲಿ ಅಚ್ಚುಕಟ್ಟಾಗಿ ಜೋಡಿಸಿಡುತ್ತಿದ್ದರು.”




ಮಧ್ಯಾಹ್ನದ ಸಮಯದಲ್ಲಿ ಅವರು ತಮ್ಮ ಮೇಜಿನ ಬಳಿ ಕುಳಿತು ತಮ್ಮ ಗ್ರಂಥಾಲಯದ  ಪುಸ್ತಕಗಳನ್ನು ಓದಲು ಯಾರಾದರೂ ಬರುತ್ತಾರೋ ಎಂದು ಆಶಿಸುತ್ತಾ ದೊಡ್ಡ ಕಿಟಕಿಯ ಹೊರಗೆ ನೋಡುತ್ತಿದ್ದರು. ಅವರು ಸಂಜೆಯವರೆಗೂ ಓದುಗರಿಗಾಗಿ ಕಾಯುತ್ತಿದ್ದರು.

ಮತ್ತೆ, ಸಂಜೆ 5 ಗಂಟೆಗೆ ಗ್ರಂಥಾಲಯದ ಕಚೇರಿಯ ಬಾಗಿಲಿಗೆ ದೊಡ್ಡ ಬೀಗ ಹಾಕಿ ಮನೆಗೆ ಹಿಂದಿರುಗುತ್ತಿದ್ದರು.



ಒಂದು ರಾತ್ರಿ, ನಿದ್ರಿಸುವ ಮೊದಲು, ಅವರು ತನ್ನಷ್ಟಕ್ಕೇ ಯೋಚಿಸಿದರು, **‘ಒಂದು ವೇಳೆ ಮಕ್ಕಳು ನನ್ನ ಲೈಬ್ರರಿಗೆ ಬಂದು ಆ ನೂರಾರು ಪುಸ್ತಕಗಳ ಒಳಗಿರುವ ಎಲ್ಲಾ ಕಥೆಗಳನ್ನು ಕೇಳಿದರೆ ಎಷ್ಟು ಚೆನ್ನಾಗಿರುತ್ತದೆ,’** ಎಂದು.



“ಅದೇ ರಾತ್ರಿ ಅವರಿಗೆ ಒಂದು ಕನಸು ಬಿತ್ತು.
ಆ ಕನಸಿನಲ್ಲಿ, ಅವರು 8 ವರ್ಷದ ಮಗುವಾಗಿದ್ದರು.
ಅವರ ಸುತ್ತಲೂ ಇನ್ನೂ ಅನೇಕ ಮಕ್ಕಳು ಇದ್ದರು.
ಅವರೆಲ್ಲಾ ಯಾರನ್ನೋ ನೋಡುತ್ತಿದ್ದರು.

ಆದರೆ ಅವರು ಯಾರಿರಬಹುದು?”





"ಅವಳು ವಯಸ್ಸಾದವಳ ಹಾಗೆ ಇದ್ದಳು. ಅವಳು ಬಣ್ಣ ಬಣ್ಣದ ನಿಲುವಂಗಿಯನ್ನು ಹಾಗೂ ಟೋಪಿಯ ಮೇಲ್ಭಾಗದಲ್ಲಿ ಒಂದು ಗಂಟೆ ಇರುವ ವಿಚಿತ್ರವಾಗಿ ಕಾಣುವ ಶಂಖುವಿನಾಕಾರದ ಟೋಪಿಯನ್ನು ಧರಿಸಿದ್ದಳು.
**ಡಿಂಗ್ ಡಿಂಗ್ ಡಾಂಗ್!**

ಅವಳು ತನ್ನ ಕೈಗಳನ್ನು ಗಾಳಿಯಲ್ಲಿ ಮೇಲೆ ಕೆಳಗೆ ಬೀಸುತ್ತಿದ್ದಳು. ಅವಳ ನೋಟವು ಪ್ರತೀ ಕ್ಷಣಕ್ಕೂ ಬದಲಾಗುತ್ತಿತ್ತು. ಎಲ್ಲಾ ಮಕ್ಕಳು ಅವಳ ಮಾತನ್ನು ಕೇಳಿದರು. ಕೆಲವರು ನಕ್ಕರು, ಇನ್ನು ಕೆಲವರು ಗಾಬರಿಯಿಂದ ನೋಡಿದರು.  ಯಾರಲ್ಲೂ ಬೇಸರವಾಗಲೀ,  ಚಡಪಡಿಕೆಯಾಗಲೀ ಕಾಣುತ್ತಿರಲಿಲ್ಲ."

“ಮರುದಿನ ಬೆಳಿಗ್ಗೆ, ಶ್ರೀನಿವಾಸ್ ಎಚ್ಚರಗೊಂಡಾಗ ಗೊಂದಲಗೊಂಡಿದ್ದರು. ಅವರು ತಮ್ಮ ಕನಸನ್ನು ನೆನಪಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದರು.

ಅದೇ ಗೊಂದಲದಲ್ಲಿದ್ದ ಅವರು ತಮ್ಮ ಕೆಲಸಕ್ಕೆ ಸಿದ್ಧರಾಗಿ ಗ್ರಂಥಾಲಯಕ್ಕೆ ಹೋದರು. ತಮ್ಮ ಬೆಳಗಿನ ಸಮಯವನ್ನು ಪುಸ್ತಕಗಳ ಧೂಳನ್ನು ಒರೆಸುತ್ತಾ ಕಳೆದರು.  ಜೊತೆಗೆ ತಮ್ಮ ದೊಡ್ಡ, ದಪ್ಪ ನೋಟ್‌ಬುಕ್‌ನಲ್ಲಿ ಏನೋ ಬರೆಯುತ್ತಿದ್ದರು.

ಮತ್ತೆ, ಊಟದ ನಂತರ, ಅವರು ತಮ್ಮ ಮೇಜಿನ ಬಳಿ ಕುಳಿತು ಖಾಲಿ ಕಿಟಕಿಯತ್ತ ನೋಡುತ್ತಿದ್ದರು.”








“ಆಗ ಅವರಿಗೆ ಕಿಟಕಿಯ ಬಳಿ ಮಕ್ಕಳು ಅತ್ತಿತ್ತ ಓಡಾಡುತ್ತಿರುವುದು ಕಾಣಿಸಿತು. ಅವರಲ್ಲಿ ಒಬ್ಬನು ಕಿಟಕಿಯ ಹತ್ತಿರ ಬಂದು ನಿಧಾನವಾಗಿ ಒಳಗೆ ಇಣುಕಿ ನೋಡಿದನು.”

“ಅವನ ತಾಯಿ ಕೆಲವು ಹೆಜ್ಜೆ ಹಿಂದೆ ನಿಂತಿದ್ದರು.

ಶ್ರೀನಿವಾಸ್ ತಕ್ಷಣ ಈ ಹುಡುಗನನ್ನು **‘ಬಾ! ಬಾ!’”** ಎಂದು ಒಳಗೆ ಕರೆದರು.



ಹುಡುಗನು ಗ್ರಂಥಾಲಯದ ಒಳಗೆ ಹೋಗಲು ಸ್ವಲ್ಪ ಭಯಗೊಂಡನಾದರೂ ಅವನಿಗೆ ಕುತೂಹಲ ಇತ್ತು. ಅವನು ತನ್ನ ತಾಯಿಯನ್ನು ಹಿಂತಿರುಗಿ ನೋಡಿ ಅವಳನ್ನು ಹತ್ತಿರ ಕರೆದನು. ಇಬ್ಬರೂ ಗ್ರಂಥಾಲಯವನ್ನು ಪ್ರವೇಶಿಸಿದರು.




“ಶ್ರೀನಿವಾಸ್ ಅವನನ್ನು “ನಿನ್ನ ಹೆಸರೇನು
ಮರಿ?” ಎಂದು ಕೇಳಿದರು.”

‘ಅಪ್ಪು,’ ಎಂದ ಹುಡುಗ.

ಶ್ರೀನಿವಾಸ್ ಗೆ ಅಂದು ಬೆಳಿಗ್ಗೆ
ಗ್ರಂಥಾಲಯಕ್ಕೆ ಬಂದಿದ್ದ ಹೊಸ
ಪುಸ್ತಕಗಳ ಪಾರ್ಸೆಲ್ ಬಗ್ಗೆ ನೆನಪಾಯಿತು.
‘ಕಥೆ ಕೇಳೋಕೆ ಇಷ್ಟಪಡ್ತೀಯಾ?’

ಎಂದು ಅಪ್ಪುವನ್ನು ಕೇಳಿದರು. ಅಪ್ಪುಗೆ ಕಥೆ
ಅಂದ್ರೆ ಏನು ಅಂತ ತಿಳಿಯಲಿಲ್ಲ. ಆದರೆ
ಹೊಸತನ್ನೇನೋ ಮಾಡೋ ಆಲೋಚನೆಯಲ್ಲಿ
ಉತ್ಸುಕನಾಗಿದ್ದ.  ಅವನು ತಲೆಯಾಡಿಸಿದ.

‘ಇಲ್ಲಿ ಬಾ ಅಪ್ಪು, ಕುಳಿತುಕೋ,’ ಎಂದು ಶ್ರೀನಿವಾಸ್ ಹೇಳಿ,
ಪುಸ್ತಕ ಓದತೊಡಗಿದರು. “ಒಂದಾನೊಂದು ಕಾಲದಲ್ಲಿ...”



“ಅವರ ಮುಖದಲ್ಲಿ ಹಲವು ಭಾವಗಳಿದ್ದವು. ಅವರ ಧ್ವನಿಯು ಸಾಕಷ್ಟು ಬಾರಿ ಬಗೆ ಬಗೆಯಲ್ಲಿ ಬದಲಾವಣೆ ಆಯಿತು. ಇದನ್ನೆಲ್ಲಾ ನೋಡೋಕೆ ಅಪ್ಪುವಿಗೆ ಬಹಳ ಆಸಕ್ತಿದಾಯಕ ಅನ್ನಿಸಿತು.


ಅವನು ಹಿಂದೆಂದೂ ಈ ರೀತಿಯದ್ದನ್ನು ಕೇಳಿರಲಿಲ್ಲ ಅಥವಾ ನೋಡಿರಲಿಲ್ಲ!”

“ಮುಂದಿನ 30 ನಿಮಿಷಗಳ ಕಾಲ ಶ್ರೀನಿವಾಸ್‌ರಿಂದ ಅಪ್ಪುಗೆ ಕಣ್ಣು ಸರಿಸಲಾಗಲಿಲ್ಲ. ಅವರನ್ನು ಬಿಟ್ಟ ಕಣ್ಣು ಬಿಟ್ಟ ಹಾಗೆ ನೋಡುತ್ತಿದ್ದ!

ಕಥೆ ಹೇಳುತ್ತಿರುವಾಗ ಅವರ ಕೈಗಳು ಆಡುವುದನ್ನು ಅಪ್ಪು ಬಿಟ್ಟ ಕಣ್ಣು ಬಿಟ್ಟ ಹಾಗೆ ನೋಡುತ್ತಿದ್ದ!”

“ಕೆಲವು ಸಮಯದವರೆಗೆ, ಅವನು ನಿಜವಾಗಿಯೂ ತಾನೂ ಆ ಕಥೆಯ ಒಂದು ಭಾಗವೆಂದೇ ಭಾವಿಸಿದನು.

ಆ ಕಥೆಯು ಅವನಂತಹ ಚಿಕ್ಕ ಹುಡುಗನದ್ದೇ ಆಗಿತ್ತು. ಕಥೆ ಮುಗಿದ ನಂತರ, ಅಪ್ಪು ಹೊರಡುವಾಗ ಶ್ರೀನಿವಾಸ್ ಅವನಿಗೆ, ‘ನಾಳೆ ಮತ್ತೆ ಬಾ’ ಎಂದು ಹೇಳಿದರು.”



“ಮರುದಿನ ಮಧ್ಯಾಹ್ನ, ಅಪ್ಪು ಮತ್ತೆ ಗ್ರಂಥಾಲಯದ ಕಿಟಕಿಯ ಬಳಿ ಇದ್ದ. ಈ ಬಾರಿ ಅವನ ಜೊತೆಗೆ ಇನ್ನೂ ನಾಲ್ಕು ಮುಖಗಳು ಕುತೂಹಲದಿಂದ ಒಳಗೆ ಇಣುಕಿದವು.”

“ಶ್ರೀನಿವಾಸ್ ಎಲ್ಲರನ್ನೂ ಒಳಗೆ ಕರೆದರು. ಅಪ್ಪು ಆತ್ಮವಿಶ್ವಾಸದಿಂದ ತನ್ನ ಗೆಳೆಯರ ಮುಂದಾಳತ್ವ ವಹಿಸಿದನು. ಶ್ರೀನಿವಾಸ್ ಕಥೆ ಓದುವುದನ್ನು ಆನಂದಿಸಿದ ಮಕ್ಕಳು ಮರುದಿನ ಪುನಃ ಬರುವುದಾಗಿ ಮಾತು ಕೊಟ್ಟರು.”



"ಮೂರನೇ ದಿನ, ಗ್ರಂಥಾಲಯದ ಪ್ರವೇಶದ್ವಾರದಲ್ಲಿ ಮಕ್ಕಳ ದಂಡೇ ಇದ್ದಿತ್ತು! ಅಪ್ಪು, ಶ್ರೀನಿವಾಸ್ ಕಡೆ ಕೈ ತೋರಿಸಿ, 'ನೋಡಿ! ಅವರೇ **ಕಥೆ ಚಿಕ್ಕಪ್ಪ**.'

ಶ್ರೀನಿವಾಸ್ ಸಂತೋಷದಿಂದ ಹಿಗ್ಗಿದರು. ಮೊದಲೆಲ್ಲಾ ನಿಶ್ಯಬ್ದವಾಗಿರುತ್ತಿದ್ದ ಗ್ರಂಥಾಲಯದ ಕೋಣೆ ಈಗ ಮಕ್ಕಳ ಕುಲುಕುಲು ನಗೆಯಿಂದ ತುಂಬಿತು."


“ಅತೀ ಶೀಘ್ರದಲ್ಲೇ ಈ ಸುದ್ದಿ
**ಕಥೆಗಳಿಲ್ಲದ ನಾಡಿನಲ್ಲಿ** ಹಬ್ಬಿತು.

ಕಥೆ ಚಿಕ್ಕಪ್ಪನ ಬಗ್ಗೆ ಕೇಳಿದ ಗ್ರಾಮಸ್ಥರೆಲ್ಲರೂ
ಅವರನ್ನು ಭೇಟಿಯಾಗಲು ಹಂಬಲಿಸಿದರು.”



“ತಾಯಂದಿರು ಕಥೆಗಳನ್ನು ಕೇಳಲು ತಮ್ಮ ಪುಟ್ಟ ಪುಟ್ಟ ಮಕ್ಕಳನ್ನೂ ಜೊತೆಗೆ ಕರೆತಂದರು.

ಸ್ಥಳೀಯ ಶಾಲೆಗಳಲ್ಲಿ ಮಕ್ಕಳಿಗೆ ಕಥೆಗಳನ್ನು ಹೇಳಲು ಕಥೆ ಚಿಕ್ಕಪ್ಪನನ್ನು ಆಹ್ವಾನಿಸಿದರು. ಶಾಲೆಗೆ ಬರಲು ಸಾಧ್ಯವಾಗದ ಮಕ್ಕಳಿಗೆ ಕಥೆ ಹೇಳಲು, ಕಥೆ ಚಿಕ್ಕಪ್ಪ ತಮ್ಮ ಕಥೆ ಪುಸ್ತಕಗಳ ಕಟ್ಟಿನೊಂದಿಗೆ ಅವರ ಮನೆಗಳಿಗೆ ಹೋಗಲು ಶುರುಮಾಡಿದರು.”





“**ಕಥೆಗಳಿಲ್ಲದ ನಾಡಿನಲ್ಲಿ,** ಈಗ ಬದುಕು ವಿಭಿನ್ನವಾಗಿ ಪರಿವರ್ತನೆಗೊಂಡಿತು. ರೈತನ ಹೆಂಡತಿ ತಾನು ಕಥೆ ಚಿಕ್ಕಪ್ಪನಿಂದ ಕೇಳಿದ ಕಥೆಯನ್ನು ರೈತನಿಗೆ ಹೇಳಿದಳು.”

“ಹಾಗೇ, ಹೇಳಿದ ಕಥೆಯನ್ನು ಕೇಳಿಸಿಕೊಂಡ ಕಾಗೆಯು ಹಾರಿಹೋಗಿ ಇತರ ಕಾಗೆಗಳಿಗೆ ತನ್ನ ಕಾಕಾ ಭಾಷೆಯಲ್ಲಿ ಆ ಕಥೆಯನ್ನು ಹೇಳಿತು.


**ಗಾಳಿಯಂತೆಯೇ, ಆ ಕಥೆಗಳು ಎಲ್ಲೆಡೆ ಸಂಚರಿಸಲು ಪ್ರಾರಂಭಿಸಿದವು.**”

***ಗಾಳಿಯಂತೆಯೇ, ಆ ಕಥೆಗಳು ಎಲ್ಲೆಡೆ ಸಂಚರಿಸಲು ಪ್ರಾರಂಭಿಸಿದವು!***



"ಮಧ್ಯಾಹ್ನದ ಸಮಯದಲ್ಲಿ ಮಕ್ಕಳು ಅಲ್ಲಿ ಇಲ್ಲಿ ಅಲೆದಾಡುವುದನ್ನು ನಿಲ್ಲಿಸಿದರು. ದೊಡ್ಡ ಮಕ್ಕಳು ಕಥೆ ಚಿಕ್ಕಪ್ಪನಿಂದ ಅನೇಕ ಕಥೆಗಳನ್ನು ಕೇಳಿದ ನಂತರ ತಮ್ಮದೇ ಆದ ಸಣ್ಣ ಸಣ್ಣ ಕಥೆಗಳನ್ನು ರಚಿಸಲು ಪ್ರಾರಂಭಿಸಿ, ಚಿಕ್ಕ ಮಕ್ಕಳಿಗೆ ಅವುಗಳನ್ನು ಹೇಳುತ್ತಿದ್ದರು.

ಈ ಕಥೆಗಳನ್ನು ಕೇಳುವ ಮೂಲಕ, ಮಕ್ಕಳು ತಮ್ಮ ಬಗ್ಗೆ ತಾವೇ ನಗುವುದನ್ನೂ, ಕಾಲ್ಪನಿಕ ರಾಕ್ಷಸರ ವಿರುದ್ಧ ಹೋರಾಡುವುದನ್ನೂ ಮತ್ತು ಜೀವನದ ರಹಸ್ಯಗಳ ಬಗ್ಗೆ ಕಲಿತು ನಲಿದರು."




“**ಕಥೆಗಳಿಲ್ಲದ ನಾಡು, ಕಥೆಯ ಸಂಪತ್ತಿನಿಂದ ತುಂಬಿದ ನಾಡಾಗಿ** ರೂಪಾಂತರಗೊಂಡ ಕಥೆಯನ್ನು ಆ ಊರಿನ ಮಕ್ಕಳು, ತಮ್ಮ ಮಕ್ಕಳಿಗೆ ಮತ್ತು ನಂತರ ಮೊಮ್ಮಕ್ಕಳಿಗೆ ಹೇಳಿದರು.”

ಇಲ್ಲಿಗೆ ‘ಶಾಂತಾ ಗ್ರಾಮ ಗ್ರಂಥಾಲಯ’ದಲ್ಲಿ ಕಥಾ ಸಮಯವು ಕೊನೆಗೊಳ್ಳುತ್ತದೆ. ವಿದ್ಯಾ ಅಕ್ಕ ಪುಸ್ತಕವನ್ನು ಮುಚ್ಚಿ ಉಮಾಳ ಹತ್ತಿರ ಅದನ್ನು ಪುಸ್ತಕಗಳ ಹಗ್ಗದಲ್ಲಿ ಹಾಕುವಂತೆ ಹೇಳಿದಳು. “ಈ ಕಥೆಯಲ್ಲಿ ನಿಮಗೆ ತುಂಬಾ ಆಸಕ್ತಿಕರ ಅನ್ನಿಸಿದ್ದು ಏನು ಅಂತ ಹೇಳ್ತೀರಾ?” ಎಂದು ವಿದ್ಯಾ ಅಕ್ಕ ಮಕ್ಕಳನ್ನು ಕೇಳಿದಳು.



“**ಕಥೆಗಳು ಎಂದಿಗೂ ಹಳೆಯದಾಗುವುದಿಲ್ಲ**
ಮತ್ತು ಗಾಳಿಯಂತೆ ಕಥೆಗಳು ಎಲ್ಲಿಯಾದರೂ
ಮತ್ತು ಎಲ್ಲಾ ಕಡೆಯೂ ಸಂಚರಿಸಬಹುದು
ಎನ್ನುವುದು ನನಗೆ ಇಷ್ಟವಾಯಿತು.

ನಾನು ದೊಡ್ಡವಳಾದ ಮೇಲೆ,
ಕಥೆ ಚಿಕ್ಕಪ್ಪನಂತೆಯೇ ಆಗಿ,
ದಿನವೂ  ಚಿಕ್ಕ ಮಕ್ಕಳಿಗೆ ಕಥೆ
ಹೇಳುತ್ತಾ ಇರೋದಿಕ್ಕೆ ಬಯಸುತ್ತೇನೆ”
ಎಂದು ಉಮಾ ಹೇಳಿದಳು.



# 'ಓದುವ ಬೆಳಕು' ಕಾರ್ಯಕ್ರಮದ ಕುರಿತು

ಕರ್ನಾಟಕ ರಾಜ್ಯವು 5600 ಕ್ಕೂ ಹೆಚ್ಚು ಗ್ರಾಮ ಪಂಚಾಯತ್ ಗ್ರಂಥಾಲಯಗಳನ್ನು ಹೊಂದಿದೆ. COVID-19 ಸಾಂಕ್ರಾಮಿಕ ಸಮಯದಲ್ಲಿ, ಪಂಚಾಯತ್ ರಾಜ್‌ನ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿರುವ ಶ್ರೀಮತಿ ಉಮಾ ಮಹದೇವನ್-ದಾಸ್ ಗುಪ್ತ ಅವರು ಗ್ರಾಮೀಣ ಸಮುದಾಯಗಳ ಮಕ್ಕಳಿಗೆ ಗುಣಮಟ್ಟದ ಸಾಹಿತ್ಯವನ್ನು ಒದಗಿಸಲು ಮತ್ತು ಸಾಂಕ್ರಾಮಿಕ ರೋಗದಿಂದಾಗಿ ಆದ ಕಲಿಕೆಯ ನಷ್ಟವನ್ನು ಕಡಿಮೆ ಮಾಡಲು ಈ ಗ್ರಂಥಾಲಯಗಳು ಸಹಕಾರಿಯಾಗಬಲ್ಲವು ಎಂಬುದನ್ನು ಮನಗಂಡರು.

ಇವರು ಗ್ರಾಮೀಣ ಸಾರ್ವಜನಿಕ ಗ್ರಂಥಾಲಯಗಳನ್ನು ಪುನರುಜ್ಜೀವನಗೊಳಿಸಲು ಕರ್ನಾಟಕದಾದ್ಯಂತ 'ಓದುವ ಬೆಳಕು' ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಮಕ್ಕಳು ಓದುವ ಅಭ್ಯಾಸವನ್ನು ರೂಢಿಸಿಕೊಳ್ಳಲು ಮತ್ತು ಸಮುದಾಯಗಳಲ್ಲಿ ಗ್ರಂಥಾಲಯ ಸಂಸ್ಕೃತಿಯನ್ನು ನಿರ್ಮಿಸಲು ಸಹಾಯ ಮಾಡುವುದು ಇದರ ಮೂಲ ಉದ್ದೇಶ. ಈ ಕಾರ್ಯಕ್ರಮದಡಿಯಲ್ಲಿ ಮಕ್ಕಳಿಗೆ ಗ್ರಂಥಾಲಯದ ಸದಸ್ಯತ್ವವನ್ನು ಉಚಿತವಾಗಿ ನೀಡಿ, ಗ್ರಂಥಾಲಯ ಕಾರ್ಡ್‌ಗಳನ್ನು ವಿತರಿಸಲಾಯಿತು. ಅನೇಕ ಗ್ರಂಥಾಲಯಗಳು ಉತ್ತಮವಾದ ಬದಲಾವಣೆಯನ್ನು ಪಡೆದುಕೊಂಡವು ಮತ್ತು ಕೆಲವು ಗ್ರಂಥಾಲಯಗಳ ಹೆಚ್ಚಿನ ಸದ್ಬಳಕೆಗಾಗಿ ಹೊಸ ಜಾಗಗಳ ಏರ್ಪಾಡನ್ನೂ ಮಾಡಿ ಕೊಡಲಾಯಿತು. ಗ್ರಂಥಾಲಯಗಳ ಡಿಜಿಟಲೀಕರಣವನ್ನು ಸಹ ಕೈಗೆತ್ತಿಕೊಂಡು, ಅನೇಕ ಗ್ರಂಥಾಲಯಗಳಿಗೆ ಕಂಪ್ಯೂಟರ್‌ಗಳು, ಸ್ಮಾರ್ಟ್ ಟಿವಿಗಳು ಮತ್ತು ಮೊಬೈಲ್ ಫೋನ್‌ಗಳನ್ನೂ ಕೂಡಾ ಒದಗಿಸಲಾಯಿತು.

ಓದುವುದನ್ನು ಇಷ್ಟಪಡುವ ಮಹದೇವನ್-ದಾಸ್ ಗುಪ್ತ ರವರು ಗ್ರಂಥಾಲಯದ ಸೌಲಭ್ಯಗಳ ಬದಲಾವಣೆಗಳು ಮಾತ್ರ ಮಕ್ಕಳನ್ನು ಆಕರ್ಷಿಸುವುದಿಲ್ಲ ಎಂದು ತಿಳಿದಿದ್ದರು. ಈ ಗ್ರಂಥಾಲಯಗಳನ್ನು ನಡೆಸುವ ಗ್ರಂಥಪಾಲಕರು ಅವುಗಳನ್ನು ಮಕ್ಕಳ ಸ್ನೇಹಿ ಸ್ಥಳಗಳನ್ನಾಗಿ ಮಾಡಲು ಹೊಸ ವಿಧಾನಗಳನ್ನು ಕಲಿಯಬೇಕಾಗಿದೆ ಹಾಗೂ ಇದನ್ನು ಮಾಡಲು, ಈ ಗ್ರಂಥಾಲಯಗಳ ಸದಸ್ಯತ್ವವನ್ನು ಹೆಚ್ಚಿಸಲು ಮತ್ತು ಹೆಚ್ಚಿನ ಮಕ್ಕಳು ದಿನನಿತ್ಯ ಬರುವಂತೆ ಮಾಡಲು ಗ್ರಂಥಪಾಲಕರಿಗೆ ಸರಿಯಾದ ಕಾರ್ಯತಂತ್ರಗಳನ್ನು ಕಲಿಯಲು ಸಹಾಯ ಮಾಡಲು ಅಧ್ಯಯನ್ ಕ್ವಾಲಿಟಿ ಎಜುಕೇಶನ್ ಫೌಂಡೇಶನ್ ಹಾಗೂ ಇತರ ನಾಗರಿಕ ಸಮಾಜ ಸಂಸ್ಥೆಗಳನ್ನು ಆಹ್ವಾನಿಸಲಾಯಿತು.

ಅಧ್ಯಯನ್ ಫೌಂಡೇಶನ್ ಕಡೆಯಿಂದ ಗ್ರಂಥಪಾಲಕರಿಗೆ ತಮ್ಮ ಗ್ರಂಥಾಲಯಗಳಲ್ಲಿ ಮಕ್ಕಳಿಗೆ ಗಟ್ಟಿ ಓದು (ರೀಡ್ ಅಲೌಡ್) ಸೆಷನ್‌ಗಳನ್ನು ನಡೆಸಲು ತರಬೇತಿ ನೀಡಲಾಯಿತು. ಈ ಕಾರ್ಯಕ್ರಮವು ಭಾರೀ ಯಶಸ್ಸನ್ನು ಕಂಡಿತು. ಇದು ಮೊದಲು ಎರಡು ಜಿಲ್ಲೆಗಳಲ್ಲಿ ಪ್ರಾರಂಭವಾಗಿ ನಂತರ ಇದನ್ನು ನಾಲ್ಕು ಜಿಲ್ಲೆಗಳಲ್ಲಿ ಅಳವಡಿಸಿಕೊಳ್ಳಲಾಯಿತು. ಈ ಕಾರ್ಯಕ್ರಮವು ಮಕ್ಕಳಿಗೆ ಮತ್ತು ಗ್ರಂಥಪಾಲಕರಿಗೆ ಕಥೆಗಳ ಮಾಂತ್ರಿಕ ಜಗತ್ತನ್ನು ಅನ್ವೇಷಿಸಲು ಸಹಾಯ ಮಾಡಿರುವುದರಿಂದ ಈಗ ಎಲ್ಲಾ ಜಿಲ್ಲೆಗಳಿಗೆ ಇದನ್ನು ವಿಸ್ತರಿಸಲು ಯೋಜಿಸಲಾಗಿದೆ.

# ಪದಕೋಶ

**ಗ್ರಾಮ ಪಂಚಾಯತಿ:** "ಗ್ರಾಮ" ಎಂದರೆ ಹಳ್ಳಿ ಮತ್ತು 'ಪಂಚಾಯತಿ' ಎಂಬುದು ಒಂದು ರೀತಿಯ ಕೌನ್ಸಿಲ್ ಅಥವಾ ಗ್ರಾಮವನ್ನು ಆಳುವ ಜನರ ಗುಂಪು, ಸ್ಥಳೀಯ ಸರ್ಕಾರ.

**ಸಾಂಕ್ರಾಮಿಕ:** ಪ್ರಪಂಚದ ಅನೇಕ ದೇಶಗಳಲ್ಲಿ ಒಂದೇ ಸಮಯದಲ್ಲಿ ರೋಗ ಹರಡುವಿಕೆ.

**ಓದುವ ಬೆಳಕು:** ಗ್ರಾಮೀಣ ಪ್ರದೇಶದ ಗ್ರಂಥಾಲಯಗಳು ಮಕ್ಕಳ ಸಂತೋಷದ ಓದುವ ಸ್ಥಳವಾಗಲು ಸಹಾಯ ಮಾಡಲು ಕರ್ನಾಟಕದಲ್ಲಿ, ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಆರಂಭಿಸಿದ ಕಾರ್ಯಕ್ರಮದ ಹೆಸರು.

**ನಾಗರಿಕ ಸಮಾಜ ಸಂಸ್ಥೆಗಳು:** ಸಮಾಜವನ್ನು ಸುಧಾರಿಸಲು ಲಾಭದ ಆಕಾಂಕ್ಷೆ ಇಲ್ಲದೇ ಕೆಲಸ ಮಾಡುವ ಸಂಸ್ಥೆಗಳು.

**ಗಟ್ಟಿ ಓದು:** ಕಥೆ ಹೇಳುವಿಕೆಯ ಒಂದು ಪ್ರಾಕಾರ. ಇದರಲ್ಲಿ ಓದುಗರು ಕಥೆಯನ್ನು ಅಭಿವ್ಯಕ್ತಿಗಳೊಂದಿಗೆ ಮಕ್ಕಳಿಗೆ ಗಟ್ಟಿಯಾಗಿ ಓದುತ್ತಾರೆ. ಇದರಿಂದ ಕಥೆಯು ಆಸಕ್ತಿದಾಯಕವಾಗುತ್ತದೆ.

# ಮನ್ನಣೆಗಳು

ಕರ್ನಾಟಕದ ಗ್ರಂಥಪಾಲಕರು ಮಾಡುತ್ತಿರುವ ಸ್ಪೂರ್ತಿದಾಯಕ ಕೆಲಸ, ಶ್ರೀಮತಿ ಉಮಾ ಮಹದೇವನ್ ದಾಸ್‌ಗುಪ್ತ (ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಆರ್‌ಡಿಪಿಆರ್),

ಮತ್ತು ಶ್ರೀಮತಿ ಪ್ರಿಯಾಂಕಾ ಫ್ರಾನ್ಸಿಸ್, (ಪಂಚಾಯತ್ ರಾಜ್ ಆಯುಕ್ತರು) ಮತ್ತು ಅವರ ಅದ್ಭುತ ತಂಡದ ಬೆಂಬಲವಿಲ್ಲದೇ ಈ ಪುಸ್ತಕವು ಸಿದ್ಧವಾಗಲು ಸಾಧ್ಯವಾಗುತ್ತಿರಲಿಲ್ಲ.

ಕಾರ್ಯಕ್ರಮದ ಸಂದರ್ಭದಲ್ಲಿ ನೀಡಿದಂತಹ ಆತಿಥ್ಯ ಮತ್ತು ಸಹಕಾರಕ್ಕಾಗಿ ಬೆಳಗಾವಿ, ಬೆಂಗಳೂರು ನಗರ, ಚಿಕ್ಕಮಗಳೂರು, ಕೊಡಗು, ಕೋಲಾರ ಮತ್ತು ತುಮಕೂರು ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಏಕ್ ಸ್ಟೆಪ್ ಫೌಂಡೇಶನ್ ಅವರ ನಿರಂತರ ಪ್ರೋತ್ಸಾಹ ಮತ್ತು ಬೆಂಬಲಕ್ಕಾಗಿ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಈ ಕಥೆಯು ಭಾರತದಾದ್ಯಂತ ಬಾಲ್ಯವನ್ನು ಆಚರಿಸಲು ಸಂತೋಷದಿಂದ ಪಾಲ್ಗೊಳ್ಳುವ ಕಾಳಜಿಯುಳ್ಳ ವಯಸ್ಕರಿಗೆ ಗೌರವ ನೀಡುವಂತಾಗಿದೆ - ಗ್ರಂಥಪಾಲಕರು, ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು, ಶಾಲಾ ಪೂರ್ವ ಶಿಕ್ಷಣಾಧಿಕಾರಿಗಳು, ವಿಶೇಷ ಶಿಕ್ಷಕರು ಸೇರಿದಂತೆ ಹಲವರು.

ಬಚ್ಪನ್ ಮನವೋ, ಬಡ್ತೆ ಝಾವೋ: Celebrate Childhood, Keep Growing : ಬಾಲ್ಯವನ್ನು ಆಚರಿಸಿ, ಬೆಳೆಯುತ್ತಾ ಇರಿ

ರೇಷ್ಮಾ ಬಚ್ವಾನಿ ಅವರ ನುರಿತ ಕಥಾ ನಿರೂಪಣೆಗಾಗಿ, ನಿಲೂಫರ್ ಮಾರ್ಷಲ್ ಅವರ ಸುಂದರವಾದ ಚಿತ್ರಗಳಿಗಾಗಿ, ವೇದಾ ಅಗರ್ ವಾಲ್ ಅವರ ಮನೋಹರವಾದ ವಿನ್ಯಾಸಕ್ಕಾಗಿ ಮತ್ತು ಮಂಗಳಾ ಗಣೇಶ್ ಅವರ ಕನ್ನಡ ಅನುವಾದಕ್ಕಾಗಿ ನಾವು ಧನ್ಯವಾದಗಳನ್ನು ಹೇಳಲು ಬಯಸುತ್ತೇವೆ.

ಈ ಅದ್ಭುತ ಯೋಜನೆಯಲ್ಲಿ ಭಾಗಿಯಾಗಿದ್ದ ಎಲ್ಲರಿಗೂ ನಮ್ಮ ಹೃದಯಾಂತರಾಳದ ಕೃತಜ್ಞತೆಗಳು.

ಅಧ್ಯಯನ್ ಕ್ವಾಲಿಟಿ ಎಜುಕೇಶನ್ ಫೌಂಡೇಶನ್‌ನ ತಂಡ, ಏಪ್ರಿಲ್ 2024

PRATHAM BOOKS storyweaver

This book was made possible by Pratham Books' StoryWeaver platform. Content under Creative Commons licenses can be downloaded, translated and can even be used to create new stories - provided you give appropriate credit, and indicate if changes were made. To know more about this, and the full terms of use and attribution, please visit the following link.

## Story Attribution:

This story: ಕಥೆ ಚಿಕ್ಕಪ್ಪ is translated by Mangala BE . The © for this translation lies with Bachpan Manao, Badhte Jao, 2024. Some rights reserved. Released under CC BY 4.0 license. Based on Original story: 'Story Chikkappa', by Reshma Bachwani . © Bachpan Manao, Badhte Jao , 2024. Some rights reserved. Released under CC BY 4.0 license.

## Other Credits:

This book has been published on StoryWeaver by Bachpan Manao, Badhte Jao, in collaboration with Adhyayan Quality Education Foundation and EkStep Foundation.

## Images Attributions:

Cover page: Adult and childrens along books, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 2: Blue background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 3: A group of people sitting in a circle, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 4: A child looking at books hanging over blue background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 5: People sitting with a book over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 6: Person over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 7: Children over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 8: Sad people over grey background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 9: Person ploughing the field, person posting a letter, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 10: Animals and birds with locks in their mouths, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license.

Disclaimer: https://www.storyweaver.org.in/terms_and_conditions

Some rights reserved. This book is CC-BY-4.0 licensed. You can copy, modify, distribute and perform the work, even for commercial purposes, all without asking permission. For full terms of use and attribution, http://creativecommons.org/licenses/by/4.0/

This book was made possible by Pratham Books' StoryWeaver platform. Content under Creative Commons licenses can be downloaded, translated and can even be used to create new stories - provided you give appropriate credit, and indicate if changes were made. To know more about this, and the full terms of use and attribution, please visit the following link.

## Images Attributions:

Page 11: Children and sleeping over grey background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 12: Two sad people sitting under dark clouds, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 13: Remote control over dark clouds, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 14: A person dusting a bookshelf over grey background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 15: Person sitting at a desk facing a bookshelf, grey background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 16: Person dreaming about books, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 17: A group of children sitting over yellow and blue background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 18: A puppet wearing multicoloured clothes over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 19: A person writing over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 20: Person sitting at a desk facing a bookshelf, Child looking through a window, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 21: Two people standing at a doorway, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 22: Child and adult talking, A pile of books, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license.

Disclaimer: https://www.storyweaver.org.in/terms_and_conditions

Some rights reserved. This book is CC-BY-4.0 licensed. You can copy, modify, distribute and perform the work, even for commercial purposes, all without asking permission. For full terms of use and attribution, http://creativecommons.org/licenses/by/4.0/

This book was made possible by Pratham Books' StoryWeaver platform. Content under Creative Commons licenses can be downloaded, translated and can even be used to create new stories - provided you give appropriate credit, and indicate if changes were made. To know more about this, and the full terms of use and attribution, please visit the following link.

Images Attributions:

Page 23: Expressive faces over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 24: Adult sitting at a desk, Children looking in through a window, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 25: A group of children, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 26: Person reading over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 27: Children sitting over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 28: Happy people, Crow on a tree branch, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 29: Children, Books, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 30: A chest full of books over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 31: Group of people over yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 32: Yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 33: A yellow background, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license. Page 34: Yellow Backdrop, by Nilufer Marshall © Bachpan Manao, Badhte Jao, 2024. Some rights reserved. Released under CC BY 4.0 license.

Disclaimer: https://www.storyweaver.org.in/terms_and_conditions

Some rights reserved. This book is CC-BY-4.0 licensed. You can copy, modify, distribute and perform the work, even for commercial purposes, all without asking permission. For full terms of use and attribution, http://creativecommons.org/licenses/by/4.0/

# ಕಥೆ ಚಿಕ್ಕಪ್ಪ

(Kannada)

ಮಕ್ಕಳಾಗಲಿ, ದೊಡ್ಡವರಾಗಲಿ ಎಲ್ಲರೂ ಒಳ್ಳೆಯ ಕಥೆಯನ್ನು ಇಷ್ಟಪಡುತ್ತಾರೆ. ನಾವು ನಮ್ಮ ಜೀವನದ ಬಗ್ಗೆ ಯೋಚಿಸಿದರೆ, ನಾವು ಅದನ್ನು ಕಥೆ ಎಂದು ಭಾವಿಸಬಹುದು. ಈಗ, ನೀವು 'ಕಥೆಗಳಿಲ್ಲದ ನಾಡು'ಎಂಬುದನ್ನು ಕಲ್ಪಿಸಿಕೊಳ್ಳಬಹುದೇ? ಕಥೆಗಳಿಲ್ಲದಿದ್ದರೆ ಜೀವನವು ಹೇಗೆ ಭಿನ್ನವಾಗಿರುತ್ತದೆ? ನೀವು ಯಾವುದನ್ನು ಹೆಚ್ಚು ಕಳೆದುಕೊಳ್ಳುತ್ತೀರಿ? 'ಕಥೆ ಚಿಕ್ಕಪ್ಪ' ಒಂದು ಹೃದಯಸ್ಪರ್ಶಿ ಕಥೆ. ವಿಚಿತ್ರ ಸನ್ನಿವೇಶಗಳು ಮತ್ತು ಸ್ಮರಣೀಯ ಪಾತ್ರಗಳೊಂದಿಗೆ ಕಥೆಗಳಿಲ್ಲದ ನಾಡು ಹೇಗೆ ಕಥಾ ಸಂಪತ್ತಿನಿಂದ ತುಂಬಿದ ನಾಡಾಗಿ ರೂಪಾಂತರಗೊಳ್ಳುತ್ತದೆ ಎಂಬುದರ ಅನಾವರಣವೇ ಈ ಕಥೆ.

ಇದು ನಾಲ್ಕನೆ ಹಂತದ ಪುಸ್ತಕ. ಸ್ಪಷ್ಟವಾಗಿ ಓದುವ ಮಕ್ಕಳಿಗಾಗಿ.

PRATHAM BOOKS storyweaver

Pratham Books goes digital to weave a whole new chapter in the realm of multilingual children's stories. Knitting together children, authors, illustrators and publishers. Folding in teachers, and translators. To create a rich fabric of openly licensed multilingual stories for the children of India and the world. Our unique online platform, StoryWeaver, is a playground where children, parents, teachers and librarians can get creative. Come, start weaving today, and help us get a book in every child's hand!